

ದಾಂತೆ, ಪೆಟ್ರಾರ್ಖರಂತೆ ನಾನು ಕೂಡ ಮಾತು ಬರದ
ಮೂಕನಾಗಿದ್ದಿದ್ದರೆ,
ಒಬ್ಬಳಿಗೇ ನನ್ನೆದೆಯನು ಬೆಳಗಿಸುತಿದ್ದೆ;
ಕವಿತೆಯಲ್ಲಿ ಅವಳ ಸುಟ್ಟು ಬೂದಿಮಾಡಿಬಿಡುತ್ತಿದ್ದೆ!
ಆಗಿದ್ದರೆ ನನ್ನ ಮಾತು, ನನ್ನ ಪ್ರೀತಿ
ವಿಜಯದೊಂದು ಕಮಾನು;
ಯುಗಯುಗಗಳವರೆಗು ಪ್ರಣಯ ದೇವತೆಯರು ಎಲ್ಲರೂ
ಅದರಡಿಯಲೆ ಗುರುತುಳಿಸದೆ ಹಾದುಹೋಗುತಿದ್ದರು!

ಓಹ್ ನಾನು ಗುಡುಗಿನಷ್ಟು ಸ್ತಬ್ಧವಾಗಿದ್ದಿದ್ದರೆ,
ಇಳಿವಯಸಿನ ಈ ಇಳೆಯೇ ಮುದುರಿ ಪತರಗುಟ್ಟುತ್ತಿತ್ತು
ನನ್ನದೊಂದು ನಡುನಡುಗುವ ತೆಕ್ಕೆಯಲ್ಲಿಯೆ.

ಶಕ್ತಿಮೀರಿ ನನ್ನ ದೀರ್ಘ ಧ್ವನಿಯೆತ್ತಿದ್ದರೆ,
ಉರಿಗೈಗಳ ತಿರುಚಿ ತಿರುಚಿ ಎಲ್ಲ ಧೂಮಕೇತುಗಳು
ನೋವಿನಿಂದ ದುಢುಂ ಎಂದು ಬಿದ್ದುಬಿಡುತ್ತಿದ್ದವು!

ನನ್ನ ಕಣ್ಣ ಕಿರಣಾವಳಿಯಿಂದ ಇರುಳ ತಿವಿಯುತಿದ್ದೆ
ಓಹ್ ನಾನು ಸೂರ್ಯನಷ್ಟು ಮಂಕಾಗಿದ್ದಿದ್ದರೆ!
ನಾನೇತಕೆ ನನ್ನ ಪ್ರಭೆಯ
ಕಾಂತಿಯಲ್ಲಿ ಮೀಯಿಸಲಿ ಈ ಬಡಕಲು ಭೂಮಿಯ?

ನಾ ಸಾಗುವೆ
ನನ್ನೊಲವಿನ ಹೊರೆಯೆಳೆಯುತ ಹೀಗೆಯೆ.
ಸನ್ನಿ ಹಿಡಿದ ಗೋಳು ಕರೆದ
ಯಾವ ಹಾಳು ರಾತ್ರಿಯಲ್ಲಿ
ಯಾವ ದೈತ್ಯವಂಶದಲ್ಲಿ
ನಾನು ಇಷ್ಟು ದೊಡ್ಡವನು
ಅಷ್ಟೇ ಬೇಡವಾದವನು
ಜನ್ಮತಾಳಿದೆ?

●ಮೂಲ: ರಷ್ಯನ್ ಕವಿ ವ್ಲದೀಮಿರ್ ಮಯಾಕೋವ್ಸ್ಕಿ
ಕನ್ನಡಕ್ಕೆ: ಎಸ್. ದಿವಾಕರ್